ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 27-11-197

***ಅಲ್ಪಕಾಲದ ಹೆಸರು ಮತ್ತು ಮಾನ್ಯತೆಯಿಂದ ಭಿನ್ನರಾಗಿರುವವರೇ ಸರ್ವರ ಪ್ರಿಯರಾಗಲು ಸಾಧ್ಯ***

(अल्पकाल के नाम और मान से न्यारे ही सर्व के प्यारे बन सकते हैं)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಮಹಾರಾಷ್ಟ್ರ ಪ್ರದೇಶ(ಬೊಂಬಾಯಿ)ದ ತಂಡಗಳ ಸಮ್ಮುಖದಲ್ಲಿ ಉಚ್ಚರಿಸಿದಂತಹ ಮಹಾವಾಕ್ಯಗಳು:**

ಇಂದು ಬಾಪ್‌ದಾದಾ ವಿಶೇಷವಾಗಿ ಮಕ್ಕಳೊಂದಿಗೆ ಮಿಲನ ಮಾಡಲು ಬಂದಿದ್ದೇವೆ. ಹೇಗೆ ಮಕ್ಕಳು ನಿರಂತರ ಯೋಗಿಗಳಾಗಿದ್ದೀರೋ ಎಂದರೆ ತಂದೆಯ ಸ್ನೇಹದ ಸಾಗರದಲ್ಲಿ ಸದಾ ಲವಲೀನ ಆಗಿದ್ದೀರೋ ಹಾಗೆಯೇ ತಂದೆಯೂ ಕೂಡ ಮಕ್ಕಳ ಸ್ನೇಹದಲ್ಲಿ ನಿರಂತರ ಮಕ್ಕಳ ಗುಣಗಾನ ಮಾಡುತ್ತೇನೆ. ಮಕ್ಕಳಲ್ಲಿ ಪ್ರತಿಯೊಬ್ಬರ ಗುಣಗಳ ಮಾಲೆ ಹಾಗೂ ಪ್ರತಿಯೊಬ್ಬರ ಶ್ರೇಷ್ಠ ಚರಿತ್ರೆಯ ಚಿತ್ರವು ಬಾಪ್‌ದಾದಾರವರ ಬಳಿ ಇವೆ. ಬಾಪ್‌ದಾದಾರವರ ಬಳಿ ಬಹಳ ದೊಡ್ಡ ಬಹಳ ಸುಂದರವಾದ ಚೈತನ್ಯ ಮೂರ್ತಿಗಳ ಮಂದಿರವೆಂದಾದರೂ ಕರೆಯಿರಿ ಅಥವಾ ಚಿತ್ರಶಾಲೆ ಎಂದಾದರೂ ಕರೆಯಿರಿ, ಅದು ಸದಾ ಎದುರಿಗೆ ಇದೆ. ಪ್ರತಿಯೊಬ್ಬರ ಚಿತ್ರ ಹಾಗೂ ಮಾಲೆಯನ್ನು ಸದಾ ತಂದೆಯು ನೋಡುತ್ತಿರುತ್ತಾರೆ. ಯಾರ ಮಾಲೆಯು ದೊಡ್ಡದು ಯಾರದು ಸಣ್ಣದು ಎನ್ನುವುದನ್ನು ನೋಡುತ್ತೇನೆ. ನೀವೆಲ್ಲರೂ ಒಬ್ಬ ತಂದೆಯನ್ನು ನೆನಪುಮಾಡಬೇಕಾಗುತ್ತದೆ. ಆದರೆ ಬಾಪ್‌ದಾದಾ ಸರ್ವ ಮಕ್ಕಳನ್ನೂ ನೆನಪು ಮಾಡಬೇಕಾಗುತ್ತದೆ. ಒಬ್ಬರನ್ನೂ ಮರೆಯಲು ಸಾಧ್ಯವಿಲ್ಲ. ಒಂದು ವೇಳೆ ಮರೆತರೆ ದೂಷಣೆಗಳು ಮಾಲೆಯನ್ನು ಧರಿಸಬೇಕಾಗುತ್ತದೆ. ಮಕ್ಕಳು ದೂಷಣೆಗಳ ಮಾಲೆಯನ್ನು ಹಾಕುತ್ತೀರಿ. ತಂದೆಯು ವಿಜಯಮಾಲೆಯನ್ನು ಹಾಕುತ್ತಾನೆ. ಮಕ್ಕಳು ತುಂಬಾ ಬುದ್ಧಿವಂತರಾಗಿದ್ದೀರಿ. ನೆರವು ತೆಗೆದುಕೊಳ್ಳುವುದರಲ್ಲಿ ಬುದ್ಧಿವಂತರಾಗಿದ್ದೀರಿ. ಆದರೆ ಧೈರ್ಯ ತಾಳುವುದರಲ್ಲಿ ನಂಬರ್ ವಾರಾಗಿದ್ದೀರಿ. ಕೆಲವರಂತು ಬೇಕಾದಷ್ಟು ಕೇಳಿದ್ದೀರಿ, ಆದರೆ ಈಗ ಏನು ಮಾಡಬೇಕಾಗಿದೆ? ಈಗ ಕೇವಲ ಮಿಲನವನ್ನು ಮಾಡುತ್ತಾ ಇರಬೇಕು. ಹೇಗೆ ಈಗಿನ ಮಿಲನವು ಸಂಪನ್ನ ಸ್ಥಿತಿಯ ಅನುಭವವನ್ನು ಮಾಡಿಸುತ್ತದೆಯೋ ಅಂತಹ ನಿರಂತರ ಮಿಲನವನ್ನು ಮಾಡಿರಿ, ಕೇಳಿದುದಕ್ಕೆ ಪ್ರತಿಯಾಗಿ ತಂದೆಯ ಸಮಾನವಾಗಿ ಅನುಭವನ್ನು ಸಂಪನ್ನಸ್ವರೂಪರಾಗಿ ತೋರಿಸಿರಿ. ಅನೇಕ ಚಡಪಡಿಸುತ್ತಿರುವವರ ಪ್ರತೀಕ್ಷೆಯನ್ನು ಸಮಾಪ್ತಿ ಮಾಡಿರಿ. ಸಂಪನ್ನ ದರ್ಶನಾರ್ಹಮೂರ್ತಿಗಳಾಗಿ ಅನೇಕರಿಗೆ ದರ್ಶನ ಮಾಡಿಸಿರಿ. ಈಗ ದುಃಖ ಅಶಾಂತಿಯ

ಅನುಭವ ಅತಿ ಆಗುತ್ತಾ ಹೋಗುತ್ತದೆ. ಅವುಗಳನ್ನು ನಿಮ್ಮ ಅಂತಿಮ ಸ್ಥಿತಿಯ ಮೂಲಕ ಸಮಾಪ್ತಿಮಾಡುವ ಕಾರ್ಯವನ್ನು ಅತಿ ತೀವ್ರತೆಯಿಂದ ಮಾಡಿಸಿ, ಮಾಸ್ಟರ್ ರಚನೆಕಾರ ಸ್ಥಿತಿಯಲ್ಲಿ ಸ್ಥಿತರಾಗಿ ನಿಮ್ಮ ರಚನೆಯ ದುಃಖ ಹಾಗೂ ಅಶಾಂತಿಯ ಸಮಸ್ಯೆಯನ್ನು ಸಮಾಪ್ತಿ ಮಾಡಿ ದುಃಖಹರ್ತಾ ಹಾಗೂ ಸುಖಕರ್ತನ ಪಾತ್ರವನ್ನು ಅಭಿನಯಿಸಿರಿ. ಸುಖ ಶಾಂತಿಯ ಖಜಾನೆಯಿಂದ ನಿಮ್ಮ ರಚನೆಗೆ ಮಹಾದಾನ ಅಥವಾ ವರದಾನವನ್ನು ನೀಡಿರಿ. ಆ ರಚನೆಯ ಆರ್ತನಾದವು ಕೇಳಿಬರುತ್ತಿದೆಯೇ? ಅಥವಾ ನಿಮ್ಮ ಜೀವನ ಕಥೆಯನ್ನೇ ನೋಡುವುದರಲ್ಲಿ ಹಾಗೂ ಹೇಳುವುದರಲ್ಲಿ ವ್ಯಸ್ತರಾಗಿದ್ದೀರೋ? ನಿಮ್ಮ ಜೀವನದ ಕರ್ಮಗಳ ಕಥೆಯನ್ನು ಅರಿತುಕೊಳ್ಳುವ ತ್ರಿಕಾಲದರ್ಶಿ ಆಗಿದೀರಲ್ಲವೇ, ಆದ್ದರಿಂದ ಈಗ ಪ್ರತಿಯೊಂದು ಕರ್ಮವನ್ನು ಅನ್ಯ ಆತ್ಮರ ಕಲ್ಯಾಣಾರ್ಥವಾದ ಕಾರ್ಯದಲ್ಲಿ ಬಳಸಿರಿ, ನಿಮ್ಮ ಕಥೆಯನ್ನು ಹೆಚ್ಚಿಗೆ ವರ್ಣನೆ ಮಾಡಬೇಡಿರಿ. ನನ್ನದೂ ಸ್ವಲ್ಪ ಕೇಳಿರಿ ಅಥವಾ ನನ್ನದೂ ಸ್ವಲ್ಪ ಮಾಡಿರಿ, ನನ್ನ ತೀರ್ಮಾನವನ್ನು ಮಾಡುವುದರಲ್ಲಿ ಸಮಯವನ್ನು ಕೊಡಿ ಎಂದು ಹೇಳಬೇಡಿರಿ. ಈಗ ಅನೇಕರ ತೀರ್ಮಾನ ಮಾಡುವವರಾಗಿರಿ. ಪ್ರತಿಯೊಬ್ಬರ ಕರ್ಮದ ಗತಿಯನ್ನು ಅರಿತುಕೊಂಡು ಗತಿ ಸದ್ಗತಿಯನ್ನು ನೀಡುವ ತೀರ್ಮಾನಮಾಡಿರಿ, ಸೌಲಭ್ಯಗಳ (ಫೆಸಿಲಿಟೀಸ್) ನ್ನು ತೆಗೆದುಕೊಳ್ಳಬೇಡಿರಿ. ಈಗ ದಾತಾ ಆಗಿ ನೀಡಿರಿ. ಯಾವುದಾದರೂ ಸೇವೆಗಾಗಿ ಅಥವಾ ಸ್ವಯಂ ನಿಮ್ಮ ಸಲುವಾಗಿ ಸೌಕರ್ಯದ ಆಧಾರದ ಮೇಲೆ ಸ್ವಯಂನ ಉನ್ನತಿ ಅಥವಾ ಸೇವೆಯ ಅಲ್ಪಕಾಲದ ಸಫಲತೆಯು ಪ್ರಾಪ್ತಿ ಆಗಿ ಬಿಡುವುದು, ಆದರೆ ಇಂದು ಶ್ರೇಷ್ಠರಾಗುವಿರಿ, ನಾಳೆ ಶ್ರೇಷ್ಠತೆಯ ಬಾಯಾರಿಕೆಯುಳ್ಳ ಅತ್ಮ ಆಗಿಬಿಡುವಿರಿ. ಸದಾ ಪ್ರಾಪ್ತಿಯ ಇಚ್ಛೆಯಲ್ಲಿ ಇರುವಿರಿ. ನನ್ನ ಹೆಸರು ಪ್ರಸಿದ್ಧಿ ಆಗಲಿ, ಕಾರ್ಯವು ಸಫಲವಾಗಲಿ ಅಂದಾಗ ಇಚ್ಛಾಮಾತ್ರಂ ಅವಿದ್ಯಾ ಸ್ವರೂಪ ಆಗಲು ಸಾಧ್ಯವಾಗುವುದಿಲ್ಲ. ಹೇಗೆ ತಂದೆಯು ನಾಮ, ರೂಪದಿಂದ ಅತೀತ ಆಗಿರುವುದರಿಂದಲೇ ಎಲ್ಲರಿಗಿಂತ ಹೆಚ್ಚು ನಾಮದ ಮಹಿಮೆಯು ತಂದೆಯದಾಗಿದೆ. ಹಾಗೆಯೇ ಅಲ್ಪಕಾಲದ ಹೆಸರು ಗೌರವದಿಂದ ಅತೀತ ಆಗಿರಿ, ಆಗ ಸದಾಕಾಲದವರೆಗೆ ಸರ್ವರಿಗೆ ಪ್ರೀತಿಪಾತ್ರರು ತಾನಾಗಿಯೇ ಆಗಿಬಿಡುವಿರಿ, ನಾಮ ಹಾಗೂ ಸನ್ಮಾನದ ಭೀಕಾರಿತನದ ಅಂಶ ಮಾತ್ರವನ್ನೂ ತ್ಯಾಗ ಮಾಡಿರಿ, ಇಂತಹ ತ್ಯಾಗಿಯು ವಿಶ್ವದ ಭಾಗ್ಯವಿಧಾತ ಆಗಲು ಸಾಧ್ಯವಾಗುತ್ತದೆ. ಕರ್ಮದ ಫಲವನ್ನೂ ಭೋಗಿಸುವ ಅಭ್ಯಾಸಿಗಳು ಹೆಚ್ಚಿಗೆ ಇದ್ದಾರೆ. ಕರ್ಮದ ಫಲವನ್ನೂ ಭೋಗಿಸುವ ಅಭ್ಯಾಸಿಗಳು ಹೆಚ್ಚಿಗೆ ಇದ್ದಾರೆ. ಆದ್ದರಿಂದ ಅಪಕ್ವ ಫಲವನ್ನು (ಕಾಯಿ) ತಿಂದುಬಿಡುತ್ತಾರೆ. ಸಂಗ್ರಹ ಆಗಲು ಅಥವಾ ಪಕ್ವ ಆಗಲು ಬಿಡುವುದಿಲ್ಲ. ಕಾಯಿ ಆಗಿರುವಂತೆಯೇ ತಿಂದರೆ ಪರಿಣಾಮ ಏನಾಗುತ್ತದೆ? ಏನಾದರೊಂದು ಗಡಿಬಿಡಿ ಆಗಿಬಿಡುವುದು. ಹಾಗೆಯೇ ಸ್ಥಿತಿಯಲ್ಲಿ ಏರುಪೇರಾಗಿಬಿಡುವುದು. ಕರ್ಮದ ಫಲವಂತು ತಾನಾಗಿಯೇ ನಿಮ್ಮ ಮುಂದೆ ಸಂಪನ್ನ ಸ್ವರೂಪದಲ್ಲಿ ಬರುವುದು. ಒಂದು ಶ್ರೇಷ್ಠ ಕರ್ಮವನ್ನು ಮಾಡಿದರೆ ಅದಕ್ಕೆ ನೂರರಷ್ಟು ಸಂಪನ್ನ ಫಲದ ಸ್ವರೂಪದಲ್ಲಿ ಬರುವುದು. ಆದರೆ ಅಲ್ಪಕಾಲದ ಇಚ್ಛಾಮಾತ್ರಂ ಅವಿದ್ಯಾ ಆಗಬೇಕು. ತ್ಯಾಗ ಮಾಡಿರಿ ಆಗ ಭಾಗ್ಯವು ತಾನಾಗಿಯೇ ನಿಮ್ಮ ಹಿಂದೆ ಬರುವುದು. ಇಚ್ಛೆಯು ಉತ್ತಮ ಕರ್ಮವನ್ನು ಸಮಾಪ್ತಿ ಮಾಡಿಸಿಬಿಡುತ್ತದೆ. ಆದ್ದರಿಂದ ಇಚ್ಛಾಮಾತ್ರಂ ಅವಿದ್ಯಾ ಆಗಿರಿ. ಈ ವಿದ್ಯೆಯ ಅವಿದ್ಯೆ ಇರಬೇಕು. ನಾನು ಮಹಾನ್ ಜ್ಞಾನಿಸ್ವರೂಪ ಆಗಿದ್ದೇನೆ ಎಂದು ತಿಳಿಯುವುದರಲ್ಲಿ ಹೆಚ್ಚು ಬುದ್ಧಿವಂತರಾಗಬೇಡಿರಿ. ಇದು ಆಗಲೇಬೇಕು, ನಾನು ಮಾಡುವೆನು, ನನಗೆ ಅದರ ಪ್ರತಿಫಲವು ದೊರೆಯಲೇಬೇಕು ಎನ್ನುವುದನ್ನು ನ್ಯಾಯವೆಂದು ತಿಳಿದುಕೊಳ್ಳಬಾರದು. ನನಗೆ ಸ್ವಲ್ಪ ನ್ಯಾಯ ದೊರೆಯಬೇಕು ಎಂದು ಭಾವಿಸಬಾರದು. ಭಗವಂತನ ಮನೆಯಲ್ಲಿಯೇ ನ್ಯಾಯವು ದೊರೆಯದಿದ್ದರೆ ಮತ್ತೆ ಎಲ್ಲಿ ನ್ಯಾಯವು ದೊರೆಯುವುದು, ಎಂದಿಗೂ ನ್ಯಾಯವನ್ನು ಬೇಡುವವರಾಗಬೇಡಿರಿ. ಯಾವ ಪ್ರಕಾರ ಬಿಕ್ಷುಕರು ಸ್ವಯಂ ತಮ್ಮನ್ನು ತೃಪ್ತ ಆತ್ಮ ಎಂದು ಅನುಭವ ಮಾಡುವುದಿಲ್ಲವೋ. ಆದ್ದರಿಂದ ಸದಾ ಸರ್ವ ಪ್ರಾಪ್ತಿಗಳಿಂದ ತೃಪ್ತ ಆತ್ಮ ಆಗಿರಿ. ಮಾಸ್ಟರ್ ಸರ್ವಶಕ್ತಿವಂತನ ಖಜಾನೆಯಲ್ಲಿ ಪ್ರಾಪ್ತಿಯಾಗದ ವಸ್ತುವೇ ಇಲ್ಲ ಎನ್ನುವುದು ಬ್ರಾಹ್ಮಣಜೀವನದ ಆದರ್ಶವಾಕ್ಯ ಆಗಿದೆ. ಈ ಆದರ್ಶವಾಕ್ಯವನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳಿರಿ, ಈಗ ಗುಹ್ಯ ಜ್ಞಾನದ ಜೊತೆ ಜೊತೆಗೆ ಪರಿವರ್ತನೆಯನ್ನೂ ಸಹ ಗುಹ್ಯವಾದುದನ್ನು ಮಾಡಿಕೊಳ್ಳಿರಿ. ಇದು ಕಷ್ಟಕರ ಎನಿಸುತ್ತದೆಯೇ? ನೀವು ಅನೇಕರ ಕಷ್ಟಗಳನ್ನು ಸಹ ಸಮಾಪ್ತಿ ಮಾಡುವವರಾಗಿದ್ದೀರಿ, ಮುಕ್ತಿ ಸೇನೆ ಆಗಿದ್ದೀರಿ.

**ಇಂತಹ ಸದಾ ಮಹಾದಾನಿ, ವರದಾನಿ, ಇಚ್ಛಾಮಾತ್ರಂ ಅವಿದ್ಯಾ ಆಗಿರುವವರು ಸ್ವಯಂನ ಬಗ್ಗೆ ತ್ಯಾಗಿಗಳು, ಸರ್ವರ ಭಾಗ್ಯವನ್ನು ರೂಪಿಸಿಕೊಳ್ಳುವ ವಿಧಾತರು, ಸದಾ ಸಂಪನ್ನ ಹಾಗೂ ಸಂತುಷ್ಟರಾಗಿರುವವರು, ಸರ್ವರ ಸಮಸ್ಯೆಗಳನ್ನು ನಿವಾರಿಸುವವರು ಆದ ತಂದೆಯ ಸಮಾನ ಶ್ರೇಷ್ಠ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ದೀದಿ ಹಾಗೂ ಬ್ರಿಜ್' ಇಂದ್ರಾ**: ಆಟಗಾರರಾಗಿ ಪ್ರತಿಯೊಂದು ಸಮಯದಲ್ಲಿ ಆಟವನ್ನು ನೋಡುವುದರಲ್ಲಿ ಆನಂದ ಉಂಟಾಗುತ್ತದೆಯಲ್ಲವೇ. ಆಟಗಾರನ ಸ್ಥಿತಿಯು ಸದಾ ಹಸನ್ಮುಖರಾಗಿರುವ ಅನುಭವವನ್ನು ಮಾಡಿಸುತ್ತದೆ. ಯಾವ ಪ್ರಕಾರದ ಆಟದ ಕೌಶಲವನ್ನು ಪ್ರಪಂಚದ ಜನರು ವಿಪತ್ಕಾರಿ ಎಂದು ತಿಳಿದುಕೊಳ್ಳುತ್ತಾರೋ ಅದನ್ನು ಆಟಗಾರರಾಗಿ ಆಟ ಆಡುವವರು ಹಾಗೂ ಆಟವನ್ನು ನೋಡುವವರು ಅಂತಹ ವಿಪತ್ಕಾರಿ ಆಟವನ್ನು ಮನೋರಂಜನೆಯ ಸಾಧನ ಎಂದು ತಿಳಿದುಕೊಳ್ಳುತ್ತಾರೆ. ಆದ್ದರಿಂದ ಎಲ್ಲಕ್ಕಿಂತಲೂ ದೊಡ್ಡ ವಿಪತ್ತೂ ಸಹ ಮಹೋರಂಜನೆಯ ದೃಶ್ಯ ಎನ್ನುವ ಅನುಭವ ಆಗಬೇಕು, ಇದೇ ಮಾಸ್ಟರ್ ರಚನೆಕಾರನ ಮಟ್ಟ ಅಥವಾ ಸ್ಥಿತಿ ಆಗಿದೆ. ಹೇಗೆ ಮಹಾವಿನಾಶವನ್ನೂ ಸಹ ಸ್ವರ್ಗದ ಹೆಬ್ಬಾಗಿಲನ್ನು ತೆರೆಯುವ ಸಾಧನವೆಂದು ನೀವು ತಿಳಿಸುತ್ತೀರಿ. ಮಹಾವಿನಾಶಕ್ಕೂ ಹಾಗೂ ಸ್ವರ್ಗದ ಹೆಬ್ಬಾಗಿಲಿಗೂ ಎಷ್ಟು ಅಜಗಜಾಂತರ ವ್ಯತ್ಯಾಸವಿದೆ. ಹೀಗೆ ಮಹಾವಿನಾಶದ ವಿಪತ್ತಿಗೂ ಸಹ ಮನೋರಂಜೆಯ ರೂಪವನ್ನು ಕೊಟ್ಟಿದ್ದೀರಲ್ಲವೇ, ಆದ್ದರಿಂದ ಅಂತಹ ಯಾವುದೇ ಪ್ರಕಾರದ ಸಣ್ಣ ಅಥವಾ ದೊಡ್ಡ ಸಮಸ್ಯೆ ಅಥವಾ ಆಪತ್ತು ಮನೋರಂಜನೆಯ ರೂಪದಲಿ ಕಂಡುಬರಬೇಕು. ಅಯ್ಯೋ ಅಯ್ಯೋ ಎನ್ನುವ ಶಬ್ದಕ್ಕೆ ಬದಲಾಗಿ ಓಹೋ ಎನ್ನುವ ಶಬ್ದವು ಹರಡಿರಬೇಕು. ಇದನ್ನು ಅಂಗದನ ಸಮಾನ ಸ್ಥಿತಿ ಎಂದು ಕರೆಯಲಾಗುತ್ತದೆ. ಯೋಗಗಳ ಸ್ಥಿತಿಯನ್ನು ಜನರು ವರ್ಣನೆ ಮಾಡುವಂತೆ ದುಃಖವೂ ಸಹ ಸುಖದ ರೂಪದಲ್ಲಿ ವರ್ಣನೆ ಆಗಬೇಕು, ದುಃಖ-ಸುಖ, ನಿಂದೆ-ಸ್ತುತಿ ಇವು ಸಮಾನ ಆಗಿ ಅನುಭವ ಆಗಬೇಕು. ಇದು ದುಃಖ ಹಾಗೂ ಇದು ಸುಖ ಎನ್ನುವ ತಿಳುವಳಿಕೆ ಇದ್ದರೂ ಸಹ ದುಃಖದ ಪ್ರಭಾವದಲ್ಲಿ ಬರಬೇಡಿರಿ. ದುಃಖವನ್ನೂ ಸಹ ಸುಖದ ದಿನಗಳು ಬರುವ ಸೂಚನೆ ಎಂದು ತಿಳಿಯಿರಿ. ಅಂತಹವರನ್ನು ಸಂಪೂರ್ಣ ಯೋಗಿ ಎಂದು ಕರೆಯಲಾಗುತ್ತದೆ. ಶತೃವನ್ನೂ ಸಹ ಸ್ನೇಹಿತನನ್ನಾಗಿ ಪರಿವರ್ತನೆ ಮಾಡಬೇಕು. ಶತೃವಿನ ಶತೃತ್ವವು ನಿಮ್ಮ ಮುಂದೆ ಪ್ರಕಟ ಆಗಬಾರದು. ಶತೃವಾಗಿ ಬಂದವರು ನಿಮಗೆ ಬಲಿಯಾಗಿ ಹೋಗಬೇಕು. ಇದು ಶಕ್ತಿಯರ ಮಹಿಮೆ ಆಗಿದೆ. ಇಂತಹ ಶಕ್ತಿಸೈನ್ಯವು ತಯಾರಾಗಿದೆಯೇ. ವಿಶ್ವವನ್ನೇ ಪರಿವರ್ತನೆ ಮಾಡುವ ಸವಾಲು ಹಾಕುವವರಿಗೆ ಇದೇನು ದೊಡ್ಡ ಮಾತು? ಇದಕ್ಕೆ ಸಹಜ ಸಾಧನವು ಯಾವುದೆಂದರೆ ತೆಗೆದುಕೊಳ್ಳುವವರಾಗಬೇಡಿರಿ, ಕೊಡುವ ದಾತ ಆಗಿರಿ. ದಾತಾನ ಮುಂದೆ ಎಲ್ಲರೂ ಸ್ವಯಂ ತಾವೇ ತಲೆಬಾಗುತ್ತಾರೆ. ಯಾರಿಗಾದರೂ ಯಾವುದಾದರೂ ಒಂದು ವಸ್ತುವನ್ನು ಕೊಟ್ಟರೆ ಅವರು ತಮ್ಮ ತಲೆ ಹಾಗೂ ಕಣ್ಣುಗಳನ್ನು ಕೆಳಗೆಮಾಡಿ ತೆಗೆದುಕೊಳ್ಳುತ್ತಾರಲ್ಲವೇ, ವಿನೀತ ಭಾವವನ್ನು ತೋರಿಸಲು ಹಾಗೆ ಮಾಡುತ್ತಾರೆ. ಅದು ಸ್ಥೂಲಯುಕ್ತಿ ಆಗಿದೆ, ಆದರೆ ಇಲ್ಲ ಸಂಸ್ಕಾರ, ಸ್ವಭಾವಗಳಿಗೆ ಮಣಿಯುವರು. ಆಗ ಮಾತ್ರ ಸ್ನೇಹಿತರೂ ಸಹ ಶರಣಾಗತ ಆಗಿಬಿಡುವರು. ಇಂತಹ ಶಕ್ತಿಸೈನ್ಯವು ತಯಾರಾಗಿದೆಯೇ. (ಬ್ರಿಜ್ ಇಂದ್ರಾರವವರಿಗೆ) ಬೊಂಬಾಯಿಯನ್ನು ತೆಗೆದುಕೊಂಡು ಬಂದಿದ್ದೀಯಲ್ಲವೇ, ಬೊಂಬಾಯಿ ಸೈನ್ಯವು ಈ ರೀತಿಯಲ್ಲಿ ತಯಾರಾಗಿದೆಯೇ, ಪ್ರಥಮ ಅವಕಾಶವು ಬೊಂಬಾಯಿಯವರಿಗೆ ದೊರೆತಿದೆ. ಆದುದರಿಂದ ಪ್ರಥಮ ಅವಕಾಶ ಉಳ್ಳವರು ತೀವ್ರಗತಿ ಉಳ್ಳವರಾಗಬೇಕಲ್ಲವೇ. ಬೊಂಬಾಯಿಯವರು ವಿಶೇಷವಾಗಿ ತಂದೆಯು ಕೊಟ್ಟಿರುವುದಕ್ಕೆ ಮರುಪಾವತಿ ಮಾಡಬೇಕು

(ಬೊಂಬಾಯಿಯವರು ಸಿಲ್ವರ್ ಜುಬಿಲಿಯನ್ನು ಮಾಡುತ್ತಿದ್ದಾರೆ) ಸಿಲ್ವರ್ ಜುಬಿಲಿಯನ್ನು ಬೇಕಾದರೆ ಆಚರಿಸಿರಿ. ಇಂತಹ ಉತ್ಸವದಲ್ಲಿಯಾದರೆ ಬಾಪ್‌ದಾದಾ ಸಹ ಬರಲು ಸಾಧ್ಯವಾಗುತ್ತದೆ. ಭಾಷಣಗಳ ಉತ್ಸವದಲ್ಲಿ ಬರುವುದಿಲ್ಲ. ಸಂಸ್ಕಾರಗಳ ಮಿಲನದಲ್ಲಿ ಬರುವೆವು. ಬೊಂಬಾಯಿಯವರು ಒಂದು ಆದರ್ಶ ಆಗಿ ಮೊದಲು ತೋರಿಸಬೇಕು. ಸದಾ ವಿಜಯಶಾಲಿಗಳು, ಸದಾ ನಿರ್ವಿಘ್ನರು ಆಗಿ ಇಂತಹ ಉತ್ಸವವನ್ನು ಆಚರಿಸಿರಿ. ಆ ಉತ್ಸವವು ಜನರನ್ನು ಎಚ್ಚರಿಸುವ ಸಲುವಾಗಿ ನಿಯೋಜಿಸಲ್ಪಡುತ್ತದೆ.

ಎಲ್ಲರಿಗೂ ಸಹ. ಈಗಿನ ಕಾಲದಲ್ಲಿ ಅನುಭವ ಮಾಡಿಸುವ ಅನುಭವೀಮೂರ್ತಿಗಳ ಅಗತ್ಯವಿದೆ. ಹೇಗೆ ವಿದೇಶದಲ್ಲಿ ಅನುಭವವನ್ನು ಮಾಡಿಸುವ ಕಾರ್ಯವು ಪ್ರಾರಂಭವಾಗಿದೆ. ಯಾವುದೋ ಈಶ್ವರೀಯ ಶಕ್ತಿಯು ಹೇಳುತ್ತಾ ಇದೆ ಎನ್ನುವ ಅನುಭವವನ್ನು ಅವರು ಮಾಡುತ್ತಿದ್ದಾರೆ. ಇಂತಹ ಅಲೆಯನ್ನು ಭಾರತದಲ್ಲಿಯೂ ಅನುಭವ ಮಾಡಿರಿ. ಅಂತಹ ಸಿಲ್ವರ್ ಜುಬಿಲಿಯನ್ನು ತಯಾರಿಸಿರಿ. ಹೇಗೆ ಮಂದಿರದಲ್ಲಿ ಹೋಗುವುದರಿಂದಲೇ ವೃತ್ತಿಯು ಪರಿವರ್ತನೆ ಆಗಿಬಿಡುತ್ತದೆಯೋ ಹಾಗೆಯೇ ಕಾರ್ಯಕ್ರಮದಲ್ಲಿ ಬರುತ್ತಲೇ ಯಾವುದಾದರೂ ಹೊಸ ಅನುಭೂತಿಯನ್ನು ಅನುಭವ ಮಾಡಲಿ, ಅಲ್ಪಕಾಲದವರೆಗೆ ಅನುಭವ ಮಾಡಿದರೂ ಸಹ ಅಲ್ಪಕಾಲದ ಮುದ್ರೆಯು ಸ್ಮೃತಿಯಲ್ಲಿ ಉಳಿದುಬಿಡುವುದು. ಈಗ ಏನು ಮಾಡಬೇಕು ಎನ್ನುವುದು ತಿಳಿಯಿತೇ. ಒಳ್ಳೆಯದು.

ಅವ್ಯಕ್ತ ಮುರಳಿ 27-11-1978.

***ಅಲ್ಪಕಾಲಿಕ ಹೆಸರು ಮತ್ತು ಗೌರವಗದಿಂದ ಭಿನ್ನರಾಗಿರುವವರೇ ಸರ್ವರ ಪ್ರಿಯರಾಗಲು ಸಾಧ್ಯ.***

ಅತಿಗೆ ಹೋಗಬೇಕಾದ ದುಃಖ ಮತ್ತು ಅಶಾಂತಿಯ ಅನುಭವವನ್ನು ನಿಮ್ಮ ಅಂತಿಮ ಸ್ಥಿತಿಯಿಂದ ಸಮಾಪ್ತಿ ಮಾಡಿ, ಸದಾ ತಂದೆಯ ಸಮಾನ ಸಂಪನ್ನ ಸ್ವರೂಪವಾಗಿ ತಯಾರಾಗಿ ಬಾಯಾರಿಕೆಯಿಂದ ಇರುವ ಅನೇಕ ಆತ್ಮರ ನಿರೀಕ್ಷಣೆಯನ್ನು ಸುಖ, ಶಾಂತಿಯ ಖಜಾನೆಗಳಿಂದ ಮಹಾದಾನ, ವರದಾನವನ್ನು ಕೊಟ್ಟು ದುಃಖಹರ್ಥ, ಸುಖಕರ್ತ ಪಾತ್ರವನ್ನು ಅಭಿನಯಿಸಿರಿ. ಅಲ್ಪಕಾಲಿಕ ಹೆಸರು, ಗೌರವಗಳಿಗೆ ಶಿವ ತಂದೆಯ ಸಮಾನವಾಗಿ ಅತೀತವಾದಾಗಲೇ ಸ್ವತಹವಾಗಿ ಸದಾಕಾಲಕ್ಕಾಗಿ ಸರ್ವರಿಗೆ ಪ್ರಿಯರಾಗುತ್ತೀರಿ. ಇಚ್ಛೆಯೆಂದರೆ ತಿಳಿಯದ ಇಚ್ಛಾ ಮಾತ್ರಂ ಅವಿದ್ಯಾಸ್ಥಿತಿಗೆ ತಲುಪಿ ಶ್ರೇಷ್ಠ ಕರ್ಮಗಳನ್ನು ಮಾಡಿ ಸಂಪನ್ನ ಫಲ ಸ್ವರೂಪವನ್ನು ಪಡೆಯಿರಿ. ಎಂದು ಹೇಳುತ್ತಾ ಶಿವತಂದೆ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯ ಸ್ನೇಹ ಸಾಗರದಲ್ಲಿ ಸದಾ ಲವಲೀನವಾಗಿರುವ ನಿರಂತರಯೋಗಿ.

2. ನಾನು ಸದಾ ತಂದೆಯ ಸಮಾನವಾದ ಸಂಪನ್ನ ಸ್ವರೂಪ.

3. ನಾನು ಚಡಪಡಿಸುತ್ತಿರುವ ಅನೇಕ ಆತ್ಮರ ಪ್ರತೀಕ್ಷೆಯನ್ನು ಸಮಾಪ್ತಿ ಮಾಡಿ, ಸಂಪನ್ನವಾಗಿ ಅನೇಕ ಆತ್ಮರಿಗೆ ದರ್ಶನವನ್ನು ಮಾಡಿಸಿರುವ ದರ್ಶನಾಮೂರ್ತಿ.

4. ನಾನು ನನ್ನ ಅಂತಿಮ ಸ್ಥಿತಿಯಿಂದ ದುಃಖಿ ಮತ್ತು ಅಶಾಂತಿಯ ಅನುಭವವನ್ನು ಸಮಾಪ್ತಿ ಮಾಡಿ ದುಃಖಹರ್ತಾ, ಸುಖ ಕರ್ತಾನ ಪಾತ್ರವನ್ನು ಅಭಿನಯಿಸಿದ್ದೇನೆ.

5. ನಾನು ಸುಖ ಮತ್ತು ಶಾಂತಿಯ ಖಜಾನೆಯಿಂದ ನನ್ನ ರಚನೆಗೆ ಮಹಾದಾನವನ್ನು ಮತ್ತು ವರದಾನವನ್ನು ಕೊಟ್ಟಿದ್ದೇನೆ.

6. ನಾನು ಪ್ರತಿಕರ್ಮವನ್ನು ಅನ್ಯ ಆತ್ಮರ ಕಲ್ಯಾಣಕ್ಕಾಗಿ ಕಾರ್ಯದಲ್ಲಿ ಉಪಯೋಗಿಸಿ, ಪ್ರತಿಯೊಬ್ಬರ ಕರ್ಮಗಳ ಗತಿಯನ್ನು ತಿಳಿದುಕೊಂಡು ಗತಿಸದ್ಗತಿಯನ್ನು ನೀಡುವ ತೀರ್ಮಾನ ಮಾಡಿದ್ದೇನೆ.

7. ನಾನು ಅಲ್ಪಕಾಲದ ಹೆಸರು ಮತ್ತು ಗೌರವವನ್ನು ಅಂಶ ಮಾತ್ರವೂ ಇರದೆ ತ್ಯಾಗ ಮಾಡಿರುವ ವಿಶ್ವಕ್ಕೆ ಭಾಗ್ಯವಿಧಾತನು.

8. ನಾನು ಇಚ್ಛಾ ಮಾತ್ರಂ ಆವಿದ್ಯಾ ಆಗಿ ಒಂದು ಶ್ರೇಷ್ಠಕರ್ಮಕ್ಕೆ 100ಪಟ್ಟು ಸಂಪನ್ನ ಫಲ ಪಡೆದಿರುವ ಫಲಸ್ವರೂಪ.